**ಸಾಕ್ಷಿಯನ್ನು ದಿನಾಂಕಃ 04.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ.ಎಸ್.ಎಂ. ವಕೀಲರಿಂದಃ**

ಆರೋಪಿ ನನಗೆ ಚರಣ್ ಎಂಬುವವರ ಮೂಲಕ ಪರಿಚಯವಾಗಿರುತ್ತಾರೆ. ನಾನು ಆರೋಪಿಯ ಮನೆಗೆ ಯಾವತ್ತೂ ಹೋಗಿರುವುದಿಲ್ಲ. ಸಾಕ್ಷಿ ಮುಂದುವರೆದು ಅವರೇ ನಮ್ಮ ಮನೆಗೆ ಬರುವುದು ಮಾಡುತ್ತಿದ್ದರೆಂದು ನುಡಿಯುತ್ತಾರೆ. ಆರೋಪಿಗೆ ಚರಣ್ ಎನ್ನುವವರು ಸ್ನೇಹಿತರಾಗಿದ್ದರು. ಸದರಿ ಚರಣ್ ನಮ್ಮ ಊರಿನವರೇ ಆಗಿರುತ್ತಾರೆ. ನಾನು ಹಾಗು ಸದರಿ ಚರಣ್ ಸ್ನೇಹಿತರಾಗಿರುತ್ತೇವೆ. ಯಾವುದೇ ವ್ಯವಹಾರ ಮಾಡುವಾಗ ಅದಕ್ಕೆ ಸಂಬಂಧಿಸಿದ ಪತ್ರವನ್ನು ಓದಿಯೇ ಸಹಿ ಮಾಡುತ್ತೇನೆಂದರೆ ಸರಿ. ನಾನು ದೂರು ಹಾಗು ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಓದಿಯೇ ಸಹಿ ಮಾಡಿರುತ್ತೇನೆ. ಆರೋಪಿ ನೀಡಿದ ಚೆಕ್ ಅವರ ಕೆನರಾ ಬ್ಯಾಂಕ್ ಗೆ ಸೇರಿದ್ದಾಗಿರುತ್ತದೆ. ಬ್ಯಾಂಕ್ ನವರು Signature Differs ಎನ್ನುವ ಹಿಂಬರಹವನ್ನು ನೀಡಿದ್ದು, ಸಾಕಷ್ಟು ಹಣ ಇರುವುದಿಲ್ಲವೆಂದು ಹಿಂಬರಹ ನೀಡಿರುವುದಿಲ್ಲ. ನಾನು ಆರೋಪಿಗೆ ಕಳುಹಿಸಿದ ನೋಟೀಸ್ ಗೆ ಆರೋಪಿಯು ಯಾವಾಗ ಪ್ರತ್ಯುತ್ತರ ಕೊಟ್ಟಿರುತ್ತಾರೆಂದು ನನಗೆ ಈಗ ನೆನಪಿರುವುದಿಲ್ಲ. ಆರೋಪಿ ಪ್ರತ್ಯುತ್ತರ ಕೊಟ್ಟ ನಂತರ ನಾವು ಮರು ಪ್ರತ್ಯುತ್ತರ ನೀಡಿದ್ದು ಅದರಲ್ಲಿ ಹಣ ಕೊಡಲು ಬಾಕಿ ಇದ್ದು ಕೊಡುವಂತೆ ತಿಳಿಸಿರುತ್ತೇವೆ. ನಿ.ಪಿ.–1 ರಲ್ಲಿ ಅಂಕಿಯಲ್ಲಿ ಬರೆದಿರುವ ಮೊತ್ತವನ್ನು ತಿದ್ದಲಾಗಿದೆ ಎಂದರೆ ಸಾಕ್ಷಿಯು ಅದು ಆರೋಪಿಗೆ ಗೊತ್ತಿರುತ್ತದೆ, ನಾನು ತಿದ್ದಿರುವುದಿಲ್ಲವೆಂದು ನುಡಿಯುತ್ತಾರೆ. ಸಾಕ್ಷಿಗೆ ನಿ.ಪಿ.–1 ರಲ್ಲಿರುವ ಸಹಿ ಹಾಗು ಆರೋಪಿ ಸಲ್ಲಿಸಿದ ವಕಾಲತ್ ಅನ್ನು ತೋರಿಸಿ ಸದರಿ ನಿ.ಪಿ.–1 ರಲ್ಲಿರುವ ಸಹಿಗು ಹಾಗು ವಕಾಲತ್ ನಲ್ಲಿರುವ ಸಹಿಗು ವ್ಯತ್ಯಾಸವಿದೆ ಎಂದು ಸೂಚಿಸಲಾಗಿ ಸಾಕ್ಷಿ ವ್ಯತ್ಯಾಸ ಇರುವುದು ನಿಜ ಅದು ಆರೋಪಿಗೆ ಗೊತ್ತಿರುತ್ತದೆಂದು ನುಡಿಯುತ್ತಾರೆ. ನಾನು ಕೃಷಿ ಬಿಟ್ಟು ಬೇರೆ ಏನು ಕೆಲಸ ಮಾಡಿಕೊಂಡಿರುವುದಿಲ್ಲ. ನಿಮ್ಮ ಸ್ನೇಹಿತನಾದ ಚರಣ್ ನನ್ನು ವಿಚಾರಣೆಗೊಳಪಡಿಸಲು ತೊಂದರೆ ಇದೆಯೇ ಎಂದು ಕೇಳಲಾಗಿ ಸಾಕ್ಷಿಯು ಆತನಿಗು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲವೆಂದು ನುಡಿಯುತ್ತಾರೆ. ನಿ.ಪಿ.–1 ರಲ್ಲಿರುವ ಸಹಿಯನ್ನು ಕೈ-ಬರಹ ತಜ್ಞರ ಪರೀಕ್ಷೆಗೆ ಕಳುಹಿಸಲು ತೊಂದರೆ ಇರುವುದಿಲ್ಲ. ನಾನು ದೂರಿನಲ್ಲಿ ತಿಳಿಸಿರುವಂತೆ ಆರೋಪಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲವೆಂದರೆ

ಸರಿಯಲ್ಲ. ಆರೋಪಿಗೆ ಹಣವನ್ನು ನೀಡುವಾಗ ನಾನು ಮತ್ತು ಆರೋಪಿ ಮಾತ್ರ ಇದ್ದಿರುತ್ತೇವೆ. ಸಾಕ್ಷಿ ಮುಂದುವರೆದು ಚಿಕ್ಕ ಮೊತ್ತದ ಹಣವಾದ್ದರಿಂದ ಬೇರೆ ಯಾರು ಇದ್ದಿರಲಿಲ್ಲವೆಂದು ನುಡಿಯುತ್ತಾರೆ. ಸಾಲದ ಹಣವನ್ನು ಕೊಡುವಾಗ ನನ್ನ ಹಾಗು ಆರೋಪಿಯ ನಡುವೆ ಯಾವುದೇ ಪತ್ರ ವ್ಯವಹಾರ ನಡೆದಿರುವುದಿಲ್ಲ. ನಾನು ಮನೆಯಲ್ಲಿದ್ದ ಹಣದಿಂದ ಆರೋಪಿಗೆ ನಗದು ರೂಪದಲ್ಲಿ ಸಾಲ ನೀಡಿರುತ್ತೇನೆ. ನನ್ನ ಹಾಗು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆಯದೇ ಇದ್ದಾಗ್ಯೂ ಸಹ ನಗದಾಗಿ ಸಾಲ ಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚರಣ್ ಹಾಗು ಆರೋಪಿಗೆ ಯಾವುದೇ ಪರಿಚಯವಿರುವುದಿಲ್ಲ, ಬದಲಾಗಿ ನಾನು ಆತನ ಹೆಸರನ್ನು ಬಳಸಿಕೊಂಡು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಕೊಟ್ಟಿರುವ ಪ್ರತ್ಯುತ್ತರವನ್ನು ಓದಿ ತಿಳಿದುಕೊಂಡಿರುತ್ತೇನೆ, ಅದರಲ್ಲಿ ಆರೋಪಿ ನನಗೆ ಕೊಡಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಆರೋಪಿಗೆ ನಾನು ಯಾವುದೇ ಸಾಲವನ್ನು ನೀಡದೇ ಇದ್ದುದರಿಂದ ಆತ ನನ್ನ ನೋಟೀಸ್ ಗೆ ಪ್ರತ್ಯುತ್ತರ ನೀಡಿದ್ದು ಆದರೂ ನಾನು ಆತನ ವಿರುದ್ಧ ಸುಳ್ಳು ಕೇಸನ್ನು ಹಾಕಿರುತ್ತೇನೆಂದರೆ ಸರಿಯಲ್ಲ. ಆರೋಪಿಯ ಚೆಕ್ ಪುಸ್ತಕ ಕಳೆದುಹೋಗಿರುವ ಸಂಬಂಧ ಪೋಲೀಸ್ ಠಾಣೆಗೆ ದೂರನ್ನು ನೀಡಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**